Online Newspaper Clipping Service
Dtd- Wednesday, 17th September 2025



ವಿಜಯ ಕರ್ನಾಟಕ

# ನೀಟ್ 2ನೇ ಸುತ್ತಿನ ವೈದ್ಯಕೀಯ ಕೌನ್ಸೆಲಿಂಗ್

■ **ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಪದವಿ ಕೋರ್ಸ್‌ಗಳ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭಿಸಲಾಗುತ್ತಿದ್ದು, ಅಭ್ಯರ್ಥಿಗಳು ತಮ್ಮ ಇಚ್ಛೆ/ಆಯ್ಕೆಗಳ ಅದಲು-ಬದಲು ಹಾಗೂ ತೆಗೆದು ಹಾಕಲು ಸೆ.17 ಮತ್ತು 18ರಂದು ಎರಡು ದಿನ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

**ಆಪ್ಷನ್ ಎಂಟ್ರಿಗೆ ಎರಡು ದಿನ ಅವಕಾಶ**

ಸೀಟ್ ಮ್ಯಾಟ್ರಿಕ್ಸ್‌ಗೆ ಹೊಸದಾಗಿ 400 ವೈದ್ಯಕೀಯ ಸೀಟು ಹೆಚ್ಚುವರಿಯಾಗಿ ಸೇರ್ಪಡೆಯಾಗಿರುವ ಹಾಗೂ ಮೈಸೂರಿನ ಫಾರೂಕಿ ವೈದ್ಯಕೀಯ ಕಾಲೇಜು ಹೊಸದಾಗಿ ಆರಂಭವಾಗುತ್ತಿರುವ ಕಾರಣ ಇಚ್ಛೆ/ ಆಯ್ಕೆಗಳನ್ನು ಮರುಕ್ರಮಗೊಳಿಸಲು ಮತ್ತೊಮ್ಮೆ ಅವಕಾಶ ನೀಡಲಾಗುತ್ತಿದೆ. ಫಾರೂಕಿ ವೈದ್ಯಕೀಯ ಕಾಲೇಜು ಹೊಸದಾಗಿರುವ ಕಾರಣ ಆ ಕಾಲೇಜಿಗೆ ಹೊಸದಾಗಿ ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಅವಕಾಶ ಇರುತ್ತದೆ. ಉಳಿದಂತೆ ಬೇರೆ ಕಾಲೇಜುಗಳಿಗೆ ಇಚ್ಛೆ/ ಆಯ್ಕೆಗಳನ್ನು ಈ ಹಂತದಲ್ಲಿ ದಾಖಲಿಸಲು ಅವಕಾಶ ಇರುವುದಿಲ್ಲ ಎಂದು ಅವರು ವಿವರಿಸಿದ್ದಾರೆ.

ಅಭ್ಯರ್ಥಿಗಳು ತಮ್ಮ ಪೋಷಕರ ಜತೆ ಚರ್ಚೆ ನಡೆಸಿ, ತಮಗೆ ಸೂಕ್ತವೆನಿಸುವ ಹಾಗೂ ಶುಲ್ಕ ಕಟ್ಟಲು ಸಾಧ್ಯವಾಗುವಂತಹ ಕಾಲೇಜುಗಳನ್ನೇ ಇಚ್ಛೆ/ ಆಯ್ಕೆ ದಾಖಲು ಮಾಡುವ ಸಂದರ್ಭದಲ್ಲಿ ಪರಿಗಣಿಸಬೇಕು.

ಮಂಗಳೂರಿನ ಶ್ರೀನಿವಾಸ ವೈದ್ಯಕೀಯ ಕಾಲೇಜಿನಲ್ಲಿ 12 ಲಕ್ಷದ ಸೀಟು 22 ಲಕ್ಷ ರೂ. ಆಗಿದೆ ಎಂದು ಕೆಲವರು ಈ ಹಿಂದೆ ದೂರಿದ್ದರು. ಅಂಥವರು ಈಗ ಇದೂ ಸೇರಿದಂತೆ ದುಬಾರಿ ಶುಲ್ಕ ಅನ್ನಿಸುವ ಕಾಲೇಜುಗಳನ್ನು ಕೈಬಿಟ್ಟು, ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಇಚ್ಛೆ/ ಆಯ್ಕೆ ದಾಖಲಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ನಂತರ ಕಡ್ಡಾಯವಾಗಿ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕಾಗುತ್ತದೆ. ಹೀಗಾಗಿ, ಆಸಕ್ತಿ ಇರುವ ಕಾಲೇಜುಗಳನ್ನು ಮಾತ್ರ ಆಪ್ಷನ್ ಪಟ್ಟಿಯಲ್ಲಿ ಇರುವ ಹಾಗೆ ನೋಡಿಕೊಳ್ಳಬೇಕು. ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಆಸಕ್ತಿ ಇರುವ ಹಾಗೂ ಒಂದು ಲಕ್ಷ ರೂ. ಕಾಷನ್ ಡೆಪಾಸಿಟ್ ಕಟ್ಟಿದ್ದರೂ ಈ ಹಿಂದಿನ ಸುತ್ತಿನಲ್ಲಿ ಎಂಜಿನಿಯರಿಂಗ್ ಇತ್ಯಾದಿ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿ ಪ್ರವೇಶ ಪಡೆದವರಿಗೂ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಅವಕಾಶ ನೀಡಲಾಗುವುದು. ಅಂಥವರು ಕಾಷನ್ ಡೆಪಾಸಿಟ್ ಕಟ್ಟಿ ಪುನಃ ಇಚ್ಛೆಗಳನ್ನು ಮರುವಿಂಗಡಣೆ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

## 351 ವಿದ್ಯಾರ್ಥಿಗಳ ಪ್ರವೇಶ ನಿರ್ಬಂಧ: ವಿಟಿಯುಗೆ ಪತ್ರ

ಎಂಜಿನಿಯರಿಂಗ್‌ನ ಅಂತಿಮ 3ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ, ಕಾಲೇಜಿಗೆ ವರದಿ ಮಾಡಿಕೊಳ್ಳದ 351 ಮಂದಿ, ಕಾಮೆಡ್-ಕೆ ಮತ್ತು ಆಡಳಿತ ಮಂಡಳಿ ಕೋಟಾದಲ್ಲಿ ಸೀಟು ಪಡೆದಿದ್ದರೂ ಅಂಥವರ ಪ್ರವೇಶಕ್ಕೆ ಅನುಮೋದನೆ ನೀಡಬಾರದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ವಿಟಿಯು ಕುಲಸಚಿವರಿಗೆ ಪತ್ರ ಬರೆದಿದ್ದಾರೆ.

ಮೂರನೇ ಸುತ್ತು ಅಂತಿಮವಾಗಿದ್ದರಿಂದ ಸೀಟು ಹಂಚಿಕೆ ನಂತರ ಕಡ್ಡಾಯವಾಗಿ ಪ್ರವೇಶ ಪಡೆಯಬೇಕಿತ್ತು. ಈ ಕುರಿತು ಹಲವು ಬಾರಿ ಹೇಳಿದ ನಂತರವೂ ಮೂರನೇ ಸುತ್ತಿನಲ್ಲಿ ಭಾಗವಹಿಸಿ, ಸೀಟು ಸಿಕ್ಕಿದ ನಂತರ ಕಾಲೇಜಿಗೆ ಹೋಗದೇ ಇರುವುದು ನಿಯಮಬಾಹಿರ. ಹೀಗಾಗಿ, ಇಂಥ ಅಭ್ಯರ್ಥಿಗಳು ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದರೂ ಅವರ ಪ್ರವೇಶಕ್ಕೆ ಅನುಮೋದನೆ ನೀಡಬಾರದು ಎಂದು ಅವರು ಕೋರಿದ್ದಾರೆ.